# ಪ್ರೇರಣಾತ್ಮಕ ಸಂದರ್ಶನ ನಡೆಸುವುದು:
# ದ್ವಿತೀಯ ಹಾಗೂ ವಿದೇಶಿ ಭಾಷಾ ಶಿಕ್ಷಕರಿಗೆ ಒಂದು ಪರಿಣಾಮಕಾರಿ ಸಾಧನ

**ಎ. ಅರುಣ್ ಕುಮಾರ್**

***

**ಪೀಠಿಕೆ**

ಕಲಿಕೆಯಲ್ಲಿ ಪ್ರೇರಣೆಯು ಕಲಿಕೆಯ ಆರಂಭ ಮತ್ತು ಅದರ ನಿರ್ವಹಣೆಗಳ ಮೇಲೆ ಗಮನ ಕೇಂದ್ರೀಕರಿಸುವ ಸಂಚಿತ ಬೌದ್ಧಿಕ ಕಾರ್ಯಶೀಲತೆಯಾಗಿದೆ (ಪಿನ್ಟ್ರಿಚ್ ಮತ್ತು ಸ್ಕಂಕ್, 1996). 'ಎರಡನೆಯ ಭಾಷಾ (L2) ಪ್ರೇರಣೆ' ಎಂಬುದು ಕಳೆದ ಕೆಲವು ದಶಕಗಳಲ್ಲಿ ಅಧ್ಯಯನದ ವಿಷಯವಾಗಿದೆ. ಎರಡನೆಯ ಭಾಷೆಯನ್ನು ಕಲಿಯಲು ಇರುವ ಪ್ರೇರಣೆಯು, ಅದನ್ನು ಕಲಿಯಲು ಇರುವ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಹೀಗೆ ಮಾಡುವುದು ಬೌದ್ಧಿಕ ಹಾಗೂ ಪರಿಸರ ಸಂಬಂಧಿ ಸಂಗತಿಗಳಲ್ಲಿನ ವ್ಯತ್ಯಾಸಗಳನ್ನು ಸರಿದೂಗಿಸುತ್ತದೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ (ಗಾರ್ಡನರ್ ಮತ್ತು ಲ್ಯಾಂಬರ್ಟ್,1979). ರಾಬರ್ಟ್ ಗಾರ್ಡನರ್, ವಾಲ್ಲೆಸ್ ಲ್ಯಾಂಬರ್ಟ್, ರಿಚರ್ಡ್ ಕ್ಲೆಮೆಂಟ್ ಹಾಗೂ ಅವರ ಸಹಚಿಂತಕರ ಸ್ಪೂರ್ತಿಯೊಂದಿಗೆ 1990ರವರೆಗೆ ಎರಡನೇ ಭಾಷೆಯನ್ನು ಕಲಿಯುವ ಸನ್ನಿವೇಶಗಳಲ್ಲಿ 'ಸಾಮಾಜಿಕ ಮನೋವೈಜ್ಞಾನಿಕ' ರೀತಿಯು ಮೇಲುಗೈ ಸಾಧಿಸಿದ್ದಿತು. ಆದಾಗ್ಯೂ, L2 ಪ್ರೇರಣಾತ್ಮಕ ಸಂಶೋಧನೆಯ ಶೈಕ್ಷಣಿಕ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚು ಗಮನ ಕೊಡುತ್ತಾ, ಎರಡನೇ ಮತ್ತು ವಿದೇಶಿ ಭಾಷೆಯ ಕಲಿಕೆಯಲ್ಲಿ ಪ್ರೇರಣೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಕೋನವು 1990ರ ನಂತರ ಬೆಳೆಯುತ್ತ ಬಂದಿತು. ಹೀಗಿದ್ದಾಗಲೂ, ತರಗತಿಗಳಲ್ಲಿ ಪ್ರೇರಣೆಯು ವಿದ್ವಾಂಸರ ಹೆಚ್ಚಿನ ಗಮನವನ್ನು ಸೆಳೆಯಲಿಲ್ಲ; ಇದರಿಂದಾಗಿ ಶಿಕ್ಷಕರು ವ್ಯವಸ್ಥಿತವಲ್ಲದ ವಿಧಾನಗಳನ್ನು ಅವಲಂಬಿಸುವ ಒತ್ತಡಕ್ಕೊಳಗಾದರು.

ಡೋರ್ನೀಯಿ (೧೯೯೮) ಪ್ರಕಾರ, L2 ಪ್ರೇರಣಾ ಸಂಶೋಧನೆಗೆ ಒದಗಿದಷ್ಟು ಬೆಂಬಲ ಕಲಿಯುವವರಿಗೆ ಪ್ರೇರಣೆ ನೀಡುವಲ್ಲಿನ ಸಂಶೋಧನೆಗೆಂದೇ ಮೀಸಲಾದದ್ದು ಅತ್ಯಲ್ಪ.

ಪ್ರಸ್ತುತ ಪ್ರಬಂಧವು ಎರಡನೇ ಮತ್ತು ವಿದೇಶಿ ಭಾಷೆಯನ್ನು ಕಲಿಯಲು ಇರುವ ವಿವಿಧ ವಿಧಾನಗಳು, ಪ್ರೇರಣಾತ್ಮಕ ಸಂದರ್ಶನ ನಡೆಸುವುದು ಮತ್ತು ಆಧುನಿಕ ಸಮಯದ ತರಗತಿಗಳಲ್ಲಿ ಅದರ ಪರಿಣಾಮಗಳನ್ನು ಕುರಿತು ಚರ್ಚಿಸುತ್ತದೆ.

**ಎರಡನೇ ಮತ್ತು ವಿದೇಶಿ ಭಾಷೆ ಕಲಿಕೆಯಲ್ಲಿ ಪ್ರೇರಣೆಯ ಪಾತ್ರ**

ಎರಡನೇ ಮತ್ತು ವಿದೇಶಿ ಭಾಷೆಯ ಕಲಿಕೆಯಲ್ಲಿ 'ಪ್ರೇರಣಾ ಪರಿಕಲ್ಪನೆ'ಯು ಯಾವ ದಿಕ್ಕಿನಲ್ಲಿ ಗಮನ ಕೇಂದ್ರೀಕರಿಸಿದೆ ಎಂಬುದನ್ನು ಅವಲಂಬಿಸಿದೆ. ರಾಬರ್ಟ್ ಗಾರ್ಡನರವರ ಸಾಮಾಜಿಕ ಮನೋವೈಜ್ಞಾನಿಕ ಪ್ರೇರಣಾ ರೀತಿಯು ಮೂರು ಸಂಗತಿಗಳನ್ನು ವಿವರಿಸುತ್ತದೆ: ಪ್ರೇರಣೆಯ ಪ್ರಾಬಲ್ಯ; ಆ ಭಾಷೆಯನ್ನು ಕಲಿಯುವ ಅಪೇಕ್ಷೆ; ಮತ್ತು ಆ ಭಾಷೆಯನ್ನು ಕಲಿಯುವ ಕಡೆಗಿನ ದೃಷ್ಟಿಕೋನ. ದೃಷ್ಟಿಕೋನ ಮತ್ತು ವರ್ತನೆ ಇವುಗಳ ನಡುವಿನ ಸಹಸಂಬಂಧವು ಆ ದೃಷ್ಟಿಕೋನ ಮತ್ತು ವರ್ತನೆಯ ಗುರಿಗಳ ನಡುವಿನ ಸಾಮ್ಯತೆಗೆ ನೇರ ಅನುಪಾತದಲ್ಲಿರುತ್ತದೆ (ಅಝೇನ್ ಮತ್ತು ಫಿಶ್ಬೀನ್, 1997). ಟ್ರೆಂಬ್ಲೇ ಮತ್ತು ಗಾರ್ಡನರವರು (1995) ನಿರೀಕ್ಷಣಾ ಮೌಲ್ಯ ಮತ್ತು ಗುರಿ ಸಿದ್ಧಾಂತದ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ಮಾದರಿಯನ್ನು ವಿಸ್ತರಿಸಿದರು.

ರಿಚರ್ಡ್ ಕ್ಲೇಮೆಂಟ್‌ರ 'ಭಾಷಿಕ ಆತ್ಮ-ವಿಶ್ವಾಸ' ಪರಿಕಲ್ಪನೆಯು ವಿದೇಶಿ ಭಾಷೆಯ ಕಲಿಕೆಯಲ್ಲಿ ಆತ್ಮ-ವಿಶ್ವಾಸದ ಪಾತ್ರ ಮಹತ್ವದ್ದಾಗಿದೆ ಎಂದು ಒತ್ತಿ ಹೇಳುತ್ತದೆ. ಸ್ವಯಂ ನಿರ್ಣಯ ಸಿದ್ಧಾಂತದ ಪ್ರಕಾರ, ಸ್ವಾಯತ್ತ ಕಲಿಕೆಯು ಪ್ರೇರಣೆಗೆ ಮಹತ್ವದ ನೆರವು ಒದಗಿಸುತ್ತದೆ. ಈ ಸಿದ್ಧಾಂತದ ಪ್ರಕಾರ, ಯಶಸ್ಸು ಅಥವಾ ವೈಫಲ್ಯಗಳಿಗೆ ಬಾಹ್ಯ ಕಾರಣಗಳನ್ನು ಗುರಿ ಮಾಡದೇ, ವಿದ್ಯಾರ್ಥಿಗಳು ತಮ್ಮ ಸ್ವಂತ ಪ್ರಯತ್ನಗಳು ಮತ್ತು ಕಲಿಕೆಯ ಮಾರ್ಗೋಪಾಯಗಳಲ್ಲಿ ಗುರುತಿಸಿಕೊಳ್ಳುವ ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಸಹಜ ಪ್ರೇರಣೆಯು ಅನುಮೋದನೀಯ (ಪ್ರಜಾಪ್ರಭುತ್ವೀಯ) ಬೋಧನಾ ಶೈಲಿಯಿಂದ ಉತ್ತೇಜಿತವಾಗಿರುತ್ತದೆ ಎಂದು ಅಧ್ಯಯನಗಳು ಕೂಡ ನಿದರ್ಶನ ನೀಡುತ್ತವೆ (ಡಿಕಿನ್ಸನ್, 1975, ಪುಟ173-174).

ಇಂಗ್ಲೀಷನ್ನು ವಿದೇಶಿ ಭಾಷೆಯಾಗಿ (EFL-English as a foreign language ) ಕಲಿಯುವವರ ಮೇಲೆ ಹಂಗೇರಿ ದೇಶದಲ್ಲಿ ನಡೆಸಿದ ಅಧ್ಯಯನವು ಸಮಗ್ರತೆ, ಭಾಷಿಕ ಆತ್ಮವಿಶ್ವಾಸ ಮತ್ತು ತರಗತಿಯಲ್ಲಿನ ಮೌಲಿಕ ವಾತಾವರಣ ಎಂಬ ತ್ರಿಪಕ್ಷೀಯ ಗುಣಗಳು ಕಲಿಕೆಯಲ್ಲಿ ಪ್ರೇರಣೆಯನ್ನು ಸಂಯೋಜಿಸುತ್ತವೆ ಎಂಬ ಅಂಶವನ್ನು ಸ್ಪಷ್ಟಪಡಿಸಿದೆ (ಕ್ಲೇಮೆಂಟ್, ಡೋರ್ನೀಯೆಯಿ ಮತ್ತು ನೋಲ್ಸ್, 1994). ಈ

ಅಧ್ಯಯನ ಚೌಕಟ್ಟಿನ ವಿವಿಧ ಅಂಶಗಳನ್ನು ಕೆಳಕಂಡ ಆಯಾಮಗಳಲ್ಲಿ ಮುಂದುವರಿದ ಅಧ್ಯಯನಗಳು ವರ್ಗೀಕರಣ ಮಾಡುತ್ತವೆ: ಭಾಷೆಯ ಮಟ್ಟ, ಕಲಿಯುವವರ ಮಟ್ಟ ಮತ್ತು ಕಲಿಕೆಯ ವಾತಾವರಣದ ಮಟ್ಟ (ಡೋರ್ನೀಯೆ, 1994). 1997ರಲ್ಲಿ ವಿಲಿಯಂಸ್ ಮತ್ತು ಬರ್ಡನ್‌ರು ಇದೇ ಬಗೆಯ ಪ್ರೇರಣಾತ್ಮಕ ಸಂಗತಿಗಳ ಚೌಕಟ್ಟನ್ನು ಅಭಿವೃದ್ಧಿಪಡಿಸಿದರು. ಆದಾಗ್ಯೂ, ಚೌಕಟ್ಟಿನಲ್ಲಿ ಪಟ್ಟಿ ಮಾಡಲಾಗಿದ್ದ ವಿವಿಧ ಪರಿಕಲ್ಪನೆಗಳಲ್ಲಿನ ನಿರ್ದೇಶಿತ ಸಂಬಂಧದ ಕೊರತೆಯನ್ನು ಎರಡೂ ಚೌಕಟ್ಟುಗಳು ಹೊಂದಿದ್ದವು. ಪ್ರಚೋದನಾತ್ಮಕ ಪ್ರಂಶಸನೀಯ ಪ್ರಕ್ರಿಯೆಯನ್ನು ಆಧರಿಸಿದ ಸುಸ್ಥಿರ ಆಳವಾದ ಕಲಿಕೆಯ ಮೂಲಕ ಭಾಷಾ ಗಳಿಕೆಯ ನರಮಂಡಲ ಜೀವಶಾಸ್ತ್ರದ ಮಾದರಿಗಳ ಮೇಲೆ ಇತ್ತೀಚಿನ  ಅಧ್ಯಯನಗಳು ಗಮನ ಕೇಂದ್ರೀಕರಿಸಿವೆ (ಷ್ಯೂಮನ್, 1998).

**ಪ್ರೇರಣಾತ್ಮಕ ಸಂದರ್ಶನ ನಡೆಸುವುದು**

ಪ್ರೇರಣಾತ್ಮಕ ಸಂದರ್ಶನ ನಡೆಸುವುದು ವಿದ್ಯಾರ್ಥಿ ಕೇಂದ್ರಿತ (client-centered)  ಸಲಹಾತ್ಮಕ ಕಲಿಕಾತಂತ್ರವಾಗಿದ್ದು, ಸಹಕಾರದಿಂದ ನಿರ್ಣಯ ತೆಗೆದುಕೊಳ್ಳುವ ವಿಧಾನದ ಮೂಲಕ ಅನಿಶ್ಚಿತತೆಯನ್ನು ಅನ್ವೇಷಸಲು ಮತ್ತು ಪರಿಹರಿಸಿಕೊಳ್ಳಲು ಉಪಯೋಗವಾಗುತ್ತದೆ (ರೋಲ್ನಿಕ್ ಮತ್ತು ಮಿಲ್ಲರ್, 1995). ಈ ಕಲಿಕಾ ಮಾರ್ಗೋಪಾಯವು ಪರಿವರ್ತನೆಯ ಸೈದ್ಧಾಂತಿಕತೆಯ ಆಚೆಗಿನ ಮಾದರಿಯಲ್ಲಿ ನೆಲೆಯೂರಿರುವಂಥದು. ಅದರ ಪ್ರಕಾರ ವರ್ತನಾ ಪರಿವರ್ತನೆಯು - ಚಿಂತನಾ ಪೂರ್ವ, ಚಿಂತನೆ, ಸಿದ್ಧತೆ, ಕ್ರಿಯೆ, ನಿರ್ವಹಣೆ ಮತ್ತು ಮುಕ್ತಾಯ ಎಂಬ ಆರು ಹಂತಗಳ ಮೂಲಕ ವಿಕಾಸವಾಗುತ್ತದೆ (ಪ್ರೋಕಸ್ಕಾ ಮತ್ತು ವೆಲಿಸರ್, 1997). ಈ ಪರಿಕಲ್ಪನೆಗಳ ಆಧಾರದ ಮೇಲೆ, ಎರಡನೇ ಮತ್ತು ವಿದೇಶಿ ಭಾಷಾ ಕಲಿಕೆಯನ್ನು ಮತ್ತು ಪ್ರೇರಣಾತ್ಮಕ ಸಂದರ್ಶನ ನಡೆಸುವ ಉತ್ತಮ ತಂತ್ರವನ್ನು ಆಧರಿಸಿ, ಭಾಷಾ ತರಗತಿಗಳಲ್ಲಿ ಸೈದ್ಧಾಂತಿಕತೆ  ಆಚೆಗಿನ ಪರಿವರ್ತನಾ ಮಾದರಿಯಾದ ಪ್ರೇರಣಾತ್ಮಕ ಸಂದರ್ಶನ ನಡೆಸುವ ತಂತ್ರವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದ್ದೇವೆ. ಈ ಕೆಳಗಿನ ವಿಭಾಗಗಳು ಪ್ರೇರಣಾತ್ಮಕ ಸಂದರ್ಶನ ತಂತ್ರದ ರೂಪರೇಷೆ ಒದಗಿಸುತ್ತವೆ.

**ಪ್ರೇರಣಾತ್ಮಕ ಸಂದರ್ಶನ ವಿಧಾನಗಳು**

ಜುಲೈ 2014ರಿಂದ ಡಿಸೆಂಬರ್ 2014ರವರೆಗೆ, ಪ್ರೇರಣಾತ್ಮಕ ಸಂದರ್ಶನ ನಡೆಸುವ ಕಲಿಕಾ ಮಾರ್ಗೋಪಾಯವನ್ನು ಅಭಿವೃದ್ಧಿಪಡಿಸಿ, ಭಾರತದ ಚೆನ್ನೈಯಲ್ಲಿನ ಸ್ಪಾನಿಶ್ ಭಾಷೆ ಕಲಿಸುವ ಖಾಸಗಿ ಸಂಸ್ಥೆಯೊಂದರಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಯಿತು. ಸ್ಪಾನಿಶ್ ಭಾಷಾ ಹಂತ 1 ಕಲಿಯುವುದಕ್ಕಾಗಿ 31 ಅಭ್ಯರ್ಥಿಗಳು (14 ಪುರುಷರು; 17 ಮಹಿಳೆಯರು) ನೋಂದಾಯಿಸಿಕೊಂಡಿದ್ದರು. ಈ ತರಗತಿಯಲ್ಲಿ, ಗುಂಪು ಮತ್ತು ವ್ಯಕ್ತಿಗತ ಎರಡೂ ರೀತಿಯ ಸಂದರ್ಶನ ತಂತ್ರಗಳನ್ನು ಉಪಯೋಗಿಸಲಾಯಿತು. 100 ತರಗತಿಗಳ ಅವಧಿಯಲ್ಲಿ ಮೂರು ಸಲ ಈ ತಂತ್ರಗಳನ್ನು (ಆರಂಭಿಕ, ಮಧ್ಯಮ ಮತ್ತು ಅಂತಿಮ) ಉಪಯೋಗಿಸಲಾಯಿತು. ಸ್ಪ್ಯಾನಿಷ್ ಭಾಷೆಯನ್ನು ಕಲಿಯಲು ವಿದ್ಯಾರ್ಥಿಯು ಕೊಟ್ಟಿರುವ ಮಹತ್ವವನ್ನು ಮತ್ತು ಅದನ್ನು ಕಲಿಯಲು ಅವರಿಗಿರುವ ಪ್ರೇರಣೆಯ ಮೌಲ್ಯಮಾಪನಕ್ಕಾಗಿ ವ್ಯಕ್ತಿಗತ ಸಂದರ್ಶನಗಳನ್ನು ಮೊದಲು ನಡೆಸಲಾಯಿತು. ಕೋರ್ಸಿನ ನಡುವೆ, 45 ನಿಮಿಷದ ಗುಂಪು ಸಂದರ್ಶನವನ್ನು ಇಂಗ್ಲೀಷಲ್ಲಿ ನಡೆಸಲಾಯಿತು. ಕೊನೆಯ ಪರೀಕ್ಷೆಯ ಬಳಿಕ, ವಿದ್ಯಾರ್ಥಿಗಳ ಪ್ರೇರಣೆಯ ಮಟ್ಟದ ಮೌಲ್ಯಮಾಪನಕ್ಕಾಗಿ ವ್ಯಕ್ತಿಗತ ಸಂದರ್ಶನ ನಡೆಸಲಾಯಿತು. ಈ ಮೌಲ್ಯಮಾಪನವು ಎರಡು ಮಾನದಂಡಗಳನ್ನು ಆಧರಿಸಿದ್ದಿತು: ಮುಂದಿನ ಹಂತಕ್ಕೆ ಮುಂದುವರೆಯುವ ಅಪೇಕ್ಷೆ ಮತ್ತು ವಿದ್ಯಾರ್ಥಿಗಳ ಕ್ಷೀಣತೆಯ ಪ್ರಮಾಣ. ತರಗತಿಯ ಆರಂಭಕ್ಕೆ ಮೊದಲು, ಮಧ್ಯದಲ್ಲಿ ಮತ್ತು ಅನಂತರದಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಸಂದರ್ಶನ ನಡೆಸಲಾಯಿತು. ಕ್ಷೇತ್ರ ಟಿಪ್ಪಣಿಗಳನ್ನು ತೆಗೆದುಕೊಂಡು ಪ್ರತ್ಯೇಕವಾಗಿ ವಿಶ್ಲೇಷಣೆ ನಡೆಸಲಾಯಿತು.

**ಫಲಿತಾಂಶಗಳು**

ವಿದ್ಯಾರ್ಥಿಗಳು ಮುಂದಿನ ಹಂತದ ಭಾಷಾ ಕಲಿಕೆಯಲ್ಲಿ ಮುಂದುವರೆಯಲು ಹೆಚ್ಚಿನ ಮಟ್ಟದಲ್ಲಿ ಪ್ರೇರಿತರಾಗಿರುವುದನ್ನೂ, ಶೇಕಡಾ 5ಕ್ಕಿಂತ ಕಡಿಮೆ ವಿದ್ಯಾರ್ಥಿ ಕ್ಷೀಣತಾ ಪ್ರಮಾಣ ಇರುವುದನ್ನು ಫಲಿತಾಂಶಗಳು ಸೂಚಿಸಿದವು. ಪರೀಕ್ಷೆಗಾಗಿ ಅನುಸರಿಸಿದ ಕಲಿಕಾ ಮಾರ್ಗೋಪಾಯಗಳನ್ನು ಉದಾಹರಣೆ ಸಮೇತ ಈ ಮುಂದೆ ವಿವರಿಸಲಾಗಿದೆ:

**1 ಅನುಮತಿಗಾಗಿ ವಿನಂತಿಸುವುದು**

ವಿದ್ಯಾರ್ಥಿಗಳನ್ನು ಪ್ರಶ್ನಿಸಲು ಆರಂಭಿಸುವ ಮೊದಲು ಅವರ ಮೌಖಿಕ ಅನುಮತಿಯನ್ನು ಪಡೆದುಕೊಳ್ಳುವ ಮೂಲಕ ಶಿಕ್ಷಕರು ಅವರಿಗೆ ಗೌರವವನ್ನು ತೋರುತ್ತಾರೆ. ಇಲ್ಲಿ, ಸುಗಮಕಾರರಾಗಿರುವ ಶಿಕ್ಷಕರು ಉಪನ್ಯಾಸ ಅಥವಾ ಉಪದೇಶಕ್ಕೆ ತೊಡಗುವುದಿಲ್ಲ.

ಉದಾಹರಣೆ:

ನೀವು ಸ್ಪ್ಯಾನಿಷ್ ಭಾಷೆಯನ್ನು ಅಧ್ಯಯನ ಮಾಡುವುದರ ಹಿಂದಿನ ಕಾರಣಗಳನ್ನು ನಾವು ಚರ್ಚಿಸಬಹುದೆ? [ಭಾಷೆಯೊಂದನ್ನು ಕಲಿಯಲು ಎಲ್ಲ ವಿದ್ಯಾರ್ಥಿಗಳ ಉದ್ದೇಶ ಒಂದೇ ತೆರನಾದುದು ಆಗಿರುವುದಿಲ್ಲ. ಅಲ್ಲಿರುವ ವ್ಯತ್ಯಾಸಗಳನ್ನು ತಿಳಿಯುವುದು ತರಗತಿಯಲ್ಲಿನ ಚಟುವಟಿಕೆಗಳು ಮತ್ತು ಕ್ರಿಯೆಗಳನ್ನು ವ್ಯಕ್ತಿಯ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಸಹಾಯವಾಗುತ್ತದೆ]

**2. ಸಹಜ ಪ್ರೇರಣೆಯನ್ನು ಹೆಕ್ಕಿತೆಗೆಯುವುದು**

ಯಾವುದೋ ಒಂದು ಸಹಜ ಪ್ರೇರಣೆಯಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ಭಾಷಾ ತರಗತಿಗೆ ಬರುತ್ತಾನೆ/ಳೆ. ಯಶಸ್ವಿ ಪ್ರೇರಣಾತ್ಮಕ ಸಂದರ್ಶನದಲ್ಲಿ, ಪರಿಣಾಮಕಾರಿ ಸಂಭಾಷಣೆಯ ಮೂಲಕ ಶಿಕ್ಷಕರು ಈ ಸಹಜ ಪ್ರೇರಣೆಯನ್ನು ಹೆಕ್ಕಿತೆಗೆಯಲು ಗಮನ ನೀಡುತ್ತಾರೆ.

ಉದಾಹರಣೆಗಳು:

- ಈ ಕೋರ್ಸ್ ಮೂಲಕ ಏನನ್ನು ಸಾಧಿಸಲು ಬಯಸಿದ್ದೀರಿ?ಸ್ಪ್ಯಾನಿಷ್ ಕಲಿಯುವುದರಿಂದ ಭವಿಷ್ಯದಲ್ಲಿ ಲಾಭವಿದೆ ಎಂದು ನಿಮಗನಿಸುತ್ತದೆಯೇ?ಸ್ಪ್ಯಾನಿಷ್ ಕಲಿಯುವುದರಿಂದ ನಿಮಗಾಗುವ ಯಾವುದಾದರೂ ಮೂರು ಲಾಭಗಳನ್ನು ತಿಳಿಸಲು ಸಾಧ್ಯವೇ?
- ಸ್ಪ್ಯಾನಿಷನ್ನು ಕಲಿತ ಐದು ವರ್ಷಗಳ ನಂತರ ನೀವು ಕಲಿಕೆಯ ಯಾವ ಮಟ್ಟದಲ್ಲಿರುತ್ತೀರಿ?

ಸ್ಪ್ಯಾನಿಷ್ ಕಲಿಯುವುದರಿಂದ ಏನಾದರೂ ನಷ್ಟವುಂಟಾಗುತ್ತದೆಯೇ?

**3. ಮಹತ್ವವನ್ನು ಹುಡುಕುವುದು**

ಎರಡನೇ ಭಾಷೆಯನ್ನು ಕಲಿಯುವುದರ ಮಹತ್ವವನ್ನು ಕಲಿಯುವವರ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದನ್ನು ಮುಂದಿನ ಹೆಜ್ಜೆಯು ಒಳಗೊಳ್ಳುತ್ತದೆ. ಇದು, ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಎಷ್ಟು ಆದ್ಯತೆ ನೀಡಿದ್ದಾರೆ ಮತ್ತು ಕೆಲ ಸಮಯದ ಬಳಿಕ ಅವರ ಆದ್ಯತೆಯು ಬದಲಾದರೆ ಅದನ್ನು ಅರ್ಥ ಮಾಡಿಕೊಳ್ಳಲು ಇದು ಸಹಾಯ ಮಾಡಬಲ್ಲದು.

ಉದಾಹರಣೆ:

ನಿಮಗೆ ಸ್ಪ್ಯಾನಿಷ್ ಎಷ್ಟು ಮುಖ್ಯವಾಗಿದೆ? ಕೆಳಗಿನಂತೆ ಆದ್ಯತಾನುಸಾರ ನೀವು ಅದನ್ನು ಗುರುತಿಸುತ್ತೀರಾ?

* ತುಂಬ ಮುಖ್ಯವಾದದ್ದು
* ಮುಖ್ಯವಾದಾದ್ದು
* ಸ್ವಲ್ಪ ಮಟ್ಟಿಗೆ ಮುಖ್ಯವಾದಾದ್ದು
* ಸ್ವಲ್ಪವೂ ಮುಖ್ಯವಾದಾದುದಲ್ಲ

**೪. ಮುಕ್ತಾಂತ ಪ್ರಶ್ನೆಗಳನ್ನು ಕೇಳುವುದು**

ಮುಕ್ತ ಪ್ರಶ್ನೆಗಳನ್ನು ಕೇಳುವುದು ಕಲಿಯುವವರು ಆಳವಾದ ಸಂಭಾಷಣೆಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತದೆ ಮತ್ತು ಸ್ಪಂದನಶೀಲ ಆಲಿಸುವಿಕೆಗೆ ಶಿಕ್ಷಕರಿಗೆ ಸಮಯವನ್ನೂ ಕೂಡ ಕೊಡುತ್ತದೆ. ಕಥೆ ಹೇಳುವ ವಿಧಾನಗಳು ಕಲಿಯುವವರನ್ನು ಹೆಚ್ಚು ಅರ್ಥ ಮಾಡಿಕೊಳ್ಳಲು ಮತ್ತು ನೇರ ಉತ್ತರ ಬಯಸುವ (ಹೌದು/ಇಲ್ಲ) ಪ್ರಶ್ನೆಗಳನ್ನು ಕೇಳುವುದರಿಂದಾಗಿ ಅವರಲ್ಲಿ ಮೂಡಬಹುದಾದ 'ತಮ್ಮನ್ನು ಪರೀಕ್ಷಿಸಲು ಪ್ರಶ್ನಿಸಲಾಗುತ್ತಿದೆ' ಎಂಬ ಭಾವನೆಯ ಬದಲು, ಅವರೊಂದಿಗೆ ಸಹಾನುಭೂತಿಯನ್ನು ಹೊಂದಲು ಸಹಾಯವಾಗುತ್ತದೆ.

ಉದಾಹರಣೆ:

ಈ ಹಿಂದೆ ನೀವು ಭಾಷೆಯನ್ನು ಕಲಿತ ಅನುಭವ ಶಾಲೆ ಅಥವಾ ಕಾಲೇಜಿನಲ್ಲಿ ಹೇಗಿತ್ತು?

**5. ಸ್ಪಂದನಶೀಲ ಆಲಿಸುವಿಕೆ**

ಶಿಕ್ಷಕರು ಸ್ಪಂದನಶೀಲರಾಗಿ ಆಲಿಸುವ ಕಲಿಕಾತಂತ್ರವನ್ನು ಅನುಸರಿಸುತ್ತಾರೆ; ಇದರಲ್ಲಿ ಕಲಿಯುವವರು ಹೇಳುವುದರ ಅಥವಾ ಹೇಳದಿರುವುದರ ವಿಚಾರಗಳು ಅಥವಾ ಅಭಿಪ್ರಾಯಗಳನ್ನು ಶಿಕ್ಷಕರು ಸರಳ ಭಾವಾನುವಾದ ಮಾಡಿಕೊಳ್ಳುತ್ತಿರುತ್ತಾರೆ. ಇದು, ವಿದ್ಯಾರ್ಥಿಗಳನ್ನು ಸಹಾನುಭೂತಿಯಿಂದ ನೋಡಲು, ಹೆಚ್ಚು ಆತ್ಮೀಯತೆಯನ್ನು ಬೆಳೆಸಿಕೊಳ್ಳಲು ಅನುವುಮಾಡಿಕೊಡುತ್ತದೆ.

ಉದಾಹರಣೆಗಳು:

- ನೀವು ಭಾಷೆಗಳನ್ನು ಕಲಿಯಲು ಭಯ ಪಡುತ್ತಿದ್ದಂತೆ ಕಾಣುತ್ತದೆ.
- ಸ್ಪ್ಯಾನಿಷನ್ನು ಕಲಿಯುವ ಮೂಲಕ ನೀವು ಪರ್ಯಾಯ ವೃತ್ತಿಯನ್ನು ಕಟ್ಟಿಕೊಳ್ಳಲು ಬಯಸಿರುವಂತೆ ತೋರುತ್ತದೆ.

**6. ಸಹಜಗೊಳಿಸುವುದು**

ಭಾಷೆ ಕಲಿಯುವಾಗ ಇತರರೂ ಕೆಲವು ಭಾಷಾ ಕಲಿಕೆಯ ಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂದು ಕಲಿಯುವವರು ಅರ್ಥ ಮಾಡಿಕೊಳ್ಳುವಂತೆ ಮಾಡಲು ಈ ಸಹಜಗೊಳಿಸುವ ಕಲಿಕಾತಂತ್ರವನ್ನು ಉಪಯೋಗಿಸಲಾಗುತ್ತದೆ.

ಉದಾಹರಣೆ:

- ಕಡಿಮೆ ನೆನಪಿನ ಶಕ್ತಿಯಿರುವುದರಿಂದ ಭಾಷೆಗಳನ್ನು ಕಲಿಯಲು ನೀವು ಕಷ್ಟಪಡುತ್ತಿದ್ದೀರಿ ಎನಿಸುತ್ತದೆ ಆದರೆ ಹೀಗಾಗುವುದು ಅಸಹಜವೇನಲ್ಲ. ಇತರ ಅನೇಕ ವಿದ್ಯಾರ್ಥಿಗಳು ಇದೇ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

**7. ನಿಶ್ಚಯಾತ್ಮಕ ಸಮತೋಲನ**

ಇದೊಂದು ಪರಿಣಾಮಕಾರಿ ಕ್ರಮ. ಇದರಲ್ಲಿ ಈ ಭಾಷೆಯನ್ನು ಕಲಿಯುವುದಕ್ಕೆ ಕಾರಣಗಳು, ಅನುಕೂಲಗಳು -ಅನಾನುಕೂಲಗಳು, ಮತ್ತು ಆ ಭಾಷಾ ಕೋರ್ಸ್‌ನ ಗುರಿಗಳ ಬಗ್ಗೆ ವಿದ್ಯಾರ್ಥಿಗಳು ಚರ್ಚಿಸುತ್ತಾರೆ. ಪ್ರಸ್ತುತ ಕಲಿಕೆಯ ವರ್ತನೆಯಲ್ಲಿ ಆ ಗುರಿಗಳನ್ನು ತಲುಪಲು ಇರುವ ಕೊರತೆಗಳನ್ನು ಅವರು ಗುರುತಿಸುತ್ತಾರೆ. ಹಲವು ತಂತ್ರಗಳ ಮೂಲಕ ಈ ಕಂದಕವನ್ನು ಹೇಗೆ ತುಂಬಿಕೊಳ್ಳಬಹುದು ಎಂಬುದರ ಕುರಿತೂ ಚರ್ಚೆ ನಡೆಸುತ್ತಾರೆ. ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳೇ ಪ್ರಮುಖ ಭಾಗಿದಾರರಾಗಿದ್ದು, ಶಿಕ್ಷಕರ ಪಾತ್ರವು ಕೇವಲ ಸುಗಮಗೊಳಿಸುವುದಾಗಿರುತ್ತದೆ. ಆರೋಪ ಅಥವಾ ನಿಶ್ಚಯಗಳು ಇಲ್ಲದೇ ಕೇವಲ ವ್ಯತ್ಯಾಸಗಳನ್ನು ಚರ್ಚಿಸಲು 'ಕಲಂಬೋ ರೀತಿಯ' ವಿಧಾನವನ್ನು ಅನುಸರಿಸಲಾಗುತ್ತದೆ. ಇದನ್ನು ಕೋರ್ಸಿನ ಯಾವುದೇ ಸಮಯದಲ್ಲಿ ಉಪಯೋಗಿಸಬಹುದು.

ಉದಾಹರಣೆ:

- ನನಗೆ ಇದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿ - ಭಾಷೆಯ ಕಲಿಕೆಗೆ ದಿನಕ್ಕೆ ಕನಿಷ್ಠ ಎರಡು ಗಂಟೆಗಳ ಸಮಯ ಕೊಡಲು ನೀವು ಬಯಸುತ್ತೀರಿ, ಆದರೆ ಸಾಧ್ಯವಾಗುತ್ತಿಲ್ಲ, ಅಲ್ಲವೇ? ಅದಕ್ಕಾಗಿ ಏನು ಮಾಡಬಹುದು?

**8. ಸ್ವ-ಪರಿಣಾಮಕಾರಿತ್ವ**

ಕೆಲವು ವಿದ್ಯಾರ್ಥಿಗಳಲ್ಲಿ ಭಾಷೆಯನ್ನು ಕಲಿಯಲು ಕಡಿಮೆ ಆತ್ಮವಿಶ್ವಾಸವಿರುತ್ತದೆ. ಸ್ವ-ಫಲಪ್ರದತೆಯನ್ನು ಬೆಂಬಲಿಸುವ ಹೇಳಿಕೆಗಳು ವಿದ್ಯಾರ್ಥಿಯು ಇನ್ನೂ ಉತ್ತಮವಾಗಿ ಕಲಿಯಲು ಸಹಾಯ ಮಾಡುತ್ತವೆ.

ಉದಾಹರಣೆ:

- ನಿಮ್ಮ ಸ್ಪ್ಯಾನಿಶ್ ಸುಧಾರಿಸಿರುವುದನ್ನು ನಾನು ನೋಡಬಲ್ಲೆ.
- ಪರಿಕಲ್ಪನೆಯನ್ನು ನೀವು ಅರ್ಥ ಮಾಡಿಕೊಂಡಿರುವಂತೆ ನನಗನ್ನಿಸುತ್ತದೆ.
- ಐವತ್ತು ಗಂಟೆಗಳ ಮುಂಚೆ ಸ್ಪ್ಯಾನಿಶ್ ಬಗ್ಗೆ ನಿಮಗೆ ಹೆಚ್ಚು ತಿಳಿದಿರಲಿಲ್ಲ, ಆದರೆ ಈಗ ನೀವು ತುಂಬಾ ಪದಗಳನ್ನು ಕಲಿತಿದ್ದೀರಿ.

**9. ದೃಢೀಕರಣಗಳು**

ಈ ವಿಧಾನದಲ್ಲಿ ಕಲಿಕಾರ್ಥಿಗಳು ಹೇಳಿದ್ದಕ್ಕೆ ಶಿಕ್ಷಕರು, ಉತ್ಪ್ರೇಕ್ಷಿತ ಪ್ರತಿಕ್ರಿಯೆಗಳನ್ನು ನೀಡುವುದನ್ನು ಬಿಟ್ಟು, ಧನಾತ್ಮಕ ದೃಢೀಕರಣಗಳನ್ನು ನೀಡುತ್ತಾರೆ.

ಉದಾಹರಣೆ:

- ಈ ಭಾಷೆಯನ್ನು ಕಲಿಯುವ ಬಗ್ಗೆ ನಿಮಗಿರುವ ದೃಢತೆ ಮತ್ತು ಅದನ್ನು ಕಲಿಯಲು ದಿನಕ್ಕೆ ಒಂದು ಗಂಟೆ ಸಮಯ ನೀಡುತ್ತೀರಿ ಎಂಬುದು ಮೆಚ್ಚಿಕೊಳ್ಳಬೇಕಾದ ವಿಚಾರ.

**10. ಸಲಹಾ ತಂತ್ರ**

ಶಿಕ್ಷಕರು ವಿದ್ಯಾರ್ಥಿಗಳಿಗೆ ಆಗಾಗ್ಗೆ ಹಿಮ್ಮಾಹಿತಿ ಕೊಡುತ್ತಿರುತ್ತಾರೆ. ಇದು ಅವರು ನಿರಂತರ ಪ್ರಗತಿ ಪಥದಲ್ಲಿರಲು ಸಹಾಯವಾಗುತ್ತದೆ.

**ಸಂವಾದ**

ಪ್ರೇರಣಾತ್ಮಕ ಸಂದರ್ಶನದ ಕಲಿಕಾ ಮಾರ್ಗೋಪಾಯವನ್ನು ಉಪಯೋಗಿಸಿದ ಬಳಿಕ, ಭಾಷೆಯ ಕಲಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಪರಿಣಾಮಕಾರಿ ನಿರ್ಣಯಗಳನ್ನು ಕೈಗೊಳ್ಳಲು ಮತ್ತು ಉದ್ದೇಶಿತ ಕಲಿಕೆಯತ್ತ ಸಾಗಲು ಸಹಾಯವಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಭಾಷೆಯ ಕಲಿಕೆಯಲ್ಲಿನ ಆರಂಭಿಕ ಯಶಸ್ಸು, ವಿದಾರ್ಥಿಗಳ ಸಹಜ ಪ್ರೇರಣೆ ಮತ್ತು ಆತ್ಮವಿಶ್ವಾಸವನ್ನು ಬಲಗೊಳಿಸುತ್ತದೆ. ಇದು ರಿಚರ್ಡ್ ಕ್ಲೇಮೆಂಟ್ ಅವರ ಭಾಷಿಕ ಆತ್ಮವಿಶ್ವಾಸ ಪರಿಕಲ್ಪನೆಯನ್ನು ದೃಢೀಕರಿಸುತ್ತದೆ. ಭಾಷೆಯನ್ನು ಕಲಿಯುವ ತರಗತಿಯಲ್ಲಿ ಶೈಕ್ಷಣಿಕ ಪರಿಣಾಮಗಳು ಹಲವು ಇವೆ. ಇವುಗಳನ್ನು ಇಡೀ ಕೋರ್ಸಿನ ಸಂದರ್ಭದಲ್ಲಿ ಹಲವು ಅವಧಿಗಳಲ್ಲಿ ಉಪಯೋಗಿಸಬಹುದು. ಈ ಮಾರ್ಗೋಪಾಯವನ್ನು ವಯೋಮಾನ, ಲಿಂಗ ಅಥವಾ ಸಾಮಾಜಿಕ-ಸಾಂಸ್ಕೃತಿಕ ಬೇಧವಿಲ್ಲದೇ ಯಾವುದೇ ಭಾಷೆ ಕಲಿಯುವ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಉಪಯೋಗಿಸಬಹುದು. ಆದಾಗ್ಯೂ, ಈ ಅಧ್ಯಯನದ ಮಿತಿಯೆಂದರೆ ಇದನ್ನು ತುಂಬ ಸಣ್ಣ ಗಾತ್ರದ ಗುಂಪಿನ ಮಾದರಿಯಿಂದ ಅಭಿವೃದ್ಧಿ ಪಡಿಸಲಾಗಿದೆ. ದೊಡ್ಡ ಗಾತ್ರದ ಮಾದರಿಯದ್ದಾಗಿದ್ದರೆ ಈ ಕಲಿಕಾ ಮಾರ್ಗೋಪಾಯದ ಪರಿಣಾಮದ ಬಗ್ಗೆ ಹೆಚ್ಚು ವಿಶಾಲವಾದ ಒಳನೋಟಗಳನ್ನು ಕೊಡುವ ಸಾಧ್ಯತೆ ಇತ್ತು.

**ಉಪಸಂಹಾರ**

ಭಾಷೆಯನ್ನು ಕಲಿಯಲು ವಿದ್ಯಾರ್ಥಿಗಳಿಗೆ ಸಹಜ ಪ್ರೇರಣೆ ನೀಡುವಲ್ಲಿ ಪ್ರೇರಣಾತ್ಮಕ ಸಂದರ್ಶನ ವಿಧಾನವು ಪರಿಣಾಮಕಾರಿಯಾಗಿದೆ. ಆದಾಗ್ಯೂ, ಅದರ ವಿವಿಧ ಸಾಂಸ್ಕೃತಿಕ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಇನ್ನೂ ಹೆಚ್ಚಿನ ಅಧ್ಯಯನಗಳ ಅಗತ್ಯವಿದೆ.

**ಡಾ. ಎ. ಅರುಣ್ ಕುಮಾರ್** ಸಂಶೋಧನಾ ಅಧಿಕಾರಿ ಮತ್ತು ಉಪನ್ಯಾಸಕರು, (ಮನೋವಿಜ್ಞಾನ ವಿಭಾಗ, ಸರ್ಕಾರಿ ಸ್ಟ್ಯಾನ್ಲಿ ಆಸ್ಪತ್ರೆ, ಚೆನ್ನೈ), ಸಿಬ್ಬಂದಿ, ಮದ್ರಾಸ್ ಸ್ಕೂಲ್ ಆಫ್ ಸೋಷಿಯಲ್ ವರ್ಕ್ ಅಂಡ್ ಚೇಫ್ ಐಡಿಯೇಟರ್ (LAMED:www.lamedresearch.com).
arun_koc2003@yahoo.co.in

***

ಪರಾಮರ್ಶನೆಗಳು

Ajzen, I., & Fishbein, M. (1977). Attitude-behavior relations: A theoretical analysis and review of empirical research. *Psychological bulletin*, *84*(5), 888.
Brophy, J. (1987). Synthesis of research on strategies for motivating students to learn. *Educational leadership*, *45*(2), 40-48.
Clément, R., Dörnyei, Z., & Noels, K. A. (1994). Motivation, self-confidence, and group cohesion in the foreign language classroom. *Language learning*, *44*, 417-417.
Dickinson, L. (1995). Autonomy and motivation a literature review. *System*, *23*(2), 165-174.
Dörnyei, Z. (1994). Motivation and motivating in the foreign language classroom. *The Modern Language Journal*, *78*(3), 273-284.
Dörnyei, Z. (1998). Motivation in second and foreign language learning. *Language Teaching*, *31*(03), 117-135.
Gardner, R. C., & Lambert, W. E. (1972). *Attitudes and motivation in second-language learning*. Rowley, MA: Newbury House.
Gardner, R. C. (1985). *Social psychology and second language learning: The role of attitudes and motivation*. London: Arnold.
Hettema, J., Steele, J., & Miller, W. R. (2005). Motivational interviewing. *Annual Revue of Clinical Psychology*, *1*, 91-111.
Noels, K. A., Clément, R., & Pelletier, L. G. (1999). Perceptions of teachers' communicative style and students' intrinsic and extrinsic motivation. *Modern Language Journal*, 23-34.
Pintrich, P. R., & Schunk, D. H. (2002). *Motivation in education: Theory, research, and applications*. Upper Saddle River, N. J.: Prentice Hall.
Prochaska, J. O., & Velicer, W. F. (1997). The transtheoretical model of health behavior

change. *American Journal of Health Promotion*, *12*(1), 38-48.
Rollnick, S., & Miller, W. R. (1995). What is motivational interviewing? *Behavioural and Cognitive Psychotherapy*, *23*(04), 325-334.
Schumann, J. H., Crowell, S. E., Jones, N. E., Lee, N., & Schuchert, S. A. (2014). *The neurobiology of learning: Perspectives from second language acquisition*. New York: Routledge.
Tremblay, P. F., & Gardner, R. C. (1995). Expanding the motivation construct in language learning. *The Modern Language Journal*, *79*(4), 505-518.
Ushioda, E. (1996). *Learner autonomy 5: The role of motivation*. Dublin: Authentik.
Williams, M., & Robert, L. (1999). Burden (1997) psychology for language teachers. *Foreign Language Teaching and Research Press*, *5*, 7- 29.

**ಚಿಂತನಾತ್ಮಕ ಪ್ರಶ್ನೆಗಳು**

1. ದ್ವಿತೀಯ ಭಾಷೆ ಅಥವಾ ವಿದೇಶಿ ಭಾಷೆ ಕಲಿಯಲು ಈ ಲೇಖನದಲ್ಲಿ ಹೇಳಿರುವ ಮಾರ್ಗೋಪಾಯಗಳನ್ನು ಮಾತೃಭಾಷೆ ಕಲಿಕೆಯಲ್ಲಿಯೂ ಬಳಸಬಹುದೇ? ಚಿಂತಿಸಿ.
2. ಈ ಪ್ರೇರಣಾತ್ಮಕ ಸಂದರ್ಶನ ಮಾದರಿಯನ್ನು ನಮ್ಮ ಶಾಲಾ ತರಗತಿಗಳಲ್ಲಿಯೂ ಅನುಸರಿಸಬಹುದೇ? ವಿಚಾರ ಮಾಡಿ.
3. ಶಿಕ್ಷಕರಾಗಿ ಈ ರೀತಿಯ ಹೊಸ ಪ್ರಯೋಗಗಳನ್ನು ನೀವು ನಿಮ್ಮ ತರಗತಿಯಲ್ಲಿ ಮಾಡಿರುವಿರಾ?

**ಅನುವಾದಕರು**: ಶಿವಾನಂದ ಹೊಂಬಳ | **ಪರಿಶೀಲನೆ**: ನಾಗಮಣಿ ಎಸ್. ಎನ್.

**ಮೂಲ:** *Language and Language Teaching* Volume 5 Number 1 Issue 9 January 2016